**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ**

**ಸಿ ಸಿ 689/2019**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ದಿನಾಂಕಃ 15–03–2025 ಸಿ ಡಬ್ಲ್ಯೂ 1/ ಡಿಡಬ್ಲ್ಯು2**

| | |
|---|---|
| ಹೆಸರು | ಶ್ರೀಕಾಂತ |
| ತಂದೆ ಹೆಸರು | ಗಿಡ್ಡಪ್ಪ |
| ವಯಸ್ಸು | 48 ವರ್ಷ |
| ಉದ್ಯೋಗ | ಕಟಿಂಗ್ ಶಾಪ್ |
| ವಾಸ ಸ್ಥಳ | ಹರಿಹರ |

**ಮುಖ್ಯ ವಿಚಾರಣೆಃ ಪಿರ್ಯಾದಿ ಪರ ವಕೀಲರಿಂದಃ**

ಸಂಗೀತಾ ಸಿರಿಗೇರಿ ಎನ್ನುವವರ ಪರಿಚಯ ನನಗೆ ಇಲ್ಲ. ಸಂಗೀತಾ ಸಿರಿಗೇರಿ ಯವರ ತಮ್ಮ ಸಂಜಯ್ ರೇವಣಸಾ ರವರ ಪರಿಚಯ ಇದೆ ಎಂದರೆ ಸರಿ. ನೀವು ಮತ್ತು ಅವರು ಆತ್ಮೀಯ ಸ್ನೇಹಿತರು ಎಂದರೆ ಸಾಕ್ಷಿಯು ನನ್ನ ಕಟಿಂಗ್ ಶಾಪ್ ಗೆ ಬರುತ್ತಿರುವುದರಿಂದ ಪರಿಚಯ. ನನಗೆ ಈ ಪ್ರಕರಣದ ಆರೋಪಿ ಸುಶಾಂತ್ ಬಿ ಚವಾಣ್ ರವರ ಪರಿಚಯವಿಲ್ಲ. ಸದರಿಯವರ ಮತ್ತು ನನ್ನ ನಡುವೆ ಯಾವುದೇ ವ್ಯವಹಾರ ಆಗಿಲ್ಲ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆ ತಮ್ಮ ಆಧಾರ ಕಾರ್ಡ ಪ್ರತಿ ಎಂದು ಒಪ್ಪಿದ್ದರಿಂದ ಅದನ್ನು ಮುಖಾಬಿಲೆಯಾಗಿ ನಿಡಿ. 2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿ ಇರುವುದಾಗಿ ಒಪ್ಪಿರುತ್ತಾರೆ. ಸದರಿ ದಾಖಲೆ 6 ಲಕ್ಷ ರೂಗಳ ಚೆಕ್ ನ ಪ್ರತಿಯಾಗಿದ್ದು ಅದನ್ನು ಮುಖಾಬಿಲೆಯಾಗಿ ನಿಡಿ. 3 ಎಂದು ಅದರ ಹಿಂಭಾಗದಲ್ಲಿನ ಸಾಕ್ಷಿಯ ಸಹಿಯನ್ನು ನಿಡಿ.3(ಎ) ಎಂದು ಗುರುತಿಸಲಾಯಿತು. ನಿಡಿ. 3 ರಲ್ಲಿರುವ ಹಣವನ್ನು ನಾನು ತುಕಾಮಣಿ ಸಾ ಬೂತೆರವರಿಗೆ ನಾನು ಕಟಿಂಗ್ ಮಾಡಲು ಅವರ ಮನೆಗೆ ಹೋದಾಗ ಬ್ಯಾಂಕಿನಿಂದ ಹಣ ತರುವುದು ಇದೆ ಎಂದು ಬಿಡಿಸಿಕೊಳ್ಳುವುದಾಗಿ ಹೇಳಿ ಅವರು ನನ್ನನ್ನು ಅವರ ಜೊತೆ ಕರೆದುಕೊಂಡು ಹೋದರು. ಅದರಂತೆ ತುಕಾಮಣಿ ಸಾ ಬೂತೆರವರು 6 ಲಕ್ಷ ರೂಗಳ ಒಂದು ಚೆಕ್ ನ್ನು ನೀಡಿದ್ದು ನಾನು ಬ್ಯಾಂಕಿಗೆ ಹೋಗಿ ಹಣವನ್ನು ಬಿಡಿಸಿಕೊಂಡು ಬಂದು ತುಕಾಮಣಿ ಸಾ ಬೂತೆರವರಿಗೆ ನೀಡಿರುತ್ತೇನೆ. ಸದರಿ ಚೆಕ್ ನಿಡಿ.3 ಎಂದರೆ ಸರಿ. ಸದರಿಯವರಿಗೆ ನಾನು ಇಷ್ಟು ಹಣವನ್ನು ಯಾವ ಕಾರಣಕ್ಕೆ ಬಿಡಿಸಿಕೊಳುತ್ತಿದ್ದೇನೆ ಎಂದು ವಿಚಾರಣೆ ಮಾಡಿಲ್ಲ. ತುಕಾಮಣಿ ಸಾ ಬೂತೆರವರು ರೇವಣಸಾ ರವರ ಸಂಬಂಧಿಕರು ಎಂದರೆ ಸರಿ. ಸಂಗೀತಾ ಸಿರಿಗೇರಿ ಪಿರ್ಯಾದಿ ರವರು ರೇವಣಸಾ ರವರ ಮಗಳು ಎಂದರೆ ಸರಿ. ನನಗೂ ಹಾಗೂ ನಿಡಿ.3 ಕ್ಕೂ ಯಾವುದೇ ಸಂಬಂಧ ಇಲ್ಲ. ನನಗೆ ಇಂಗ್ಲೀಷ್ ಓದಲು ಮತ್ತು ಬರೆಯಲು ಬರುವುದಿಲ್ಲ. ನಿಡಿ.3 ನ್ನು ತುಕಾಮಣಿ ಸಾ ರವರು

ಬರೆದು ನೀಡಿರುತ್ತಾರೆ.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ ಆರ್ ಪಿ ವಕೀಲರಿಂದಃ

ನಿಡಿ.3 ನ್ನು ನನ್ನ ಸಮಕ್ಷಮ ಬರವಣಿಗೆ ಮಾಡಿಲ್ಲ. ಈ ದಿನ ನಾನು ನ್ಯಾಯಾಲಯಕ್ಕೆ ಯಾವ ಉದ್ದೇಶಕ್ಕೆ ಬಂದಿದ್ದೇನೆ ಎಂದು ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನ್ಯಾಯಾಲಯದಿಂದ ನೋಟೀಸ್ ಬಂದಿದ್ದರಿಂದ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ನಾನು ತುಕಾಮಣಿ ಸಾ ರವರು ನನ್ನನ್ನು ಬ್ಯಾಂಕಿಗೆ ಕರೆದುಕೊಂಡು ಹೋದ ಸಂದರ್ಭದಲ್ಲಿ ಪಿರ್ಯಾದಿ ಅಥವಾ ರೇವಣಸಾ ಮತ್ತು ಬೇರೆ ಯಾರೂ ಇರಲಿಲ್ಲ. ನಾನು ಈ ದಿನ ಯಾವ ಪ್ರಕರಣದಲ್ಲಿ ಯಾವ ಉದ್ದೇಶಕ್ಕೆ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಗೊತ್ತಿಲ್ಲ.

ಪಿರ್ಯಾದಿ ಸಂಗೀತಾ ಸಿರಿಗೇರಿ ರವರು ಬೆಳಗಾವಿಯಲ್ಲಿ ಆರೋಪಿ ಮತ್ತು ಆರೋಪಿ ಗೆಳೆಯ ಶ್ರೀದತ್ ಮೆಹರವಾಡೆ ರವರ ಮೂಲಕ ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರವಾಗಿ ಅವರ ನಡುವೆ ಒಂದು ಒಪ್ಪಂದ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಆ ಕುರಿತಾಗಿ ರವರು ಆರೋಪಿಗೆ 5,50,000/- ರೂ ಹಣ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ದಿಃ 25.05.2019 ಕ್ಕೆ ಪಿರ್ಯಾದಿ ಮತ್ತು ಆರೋಪಿ ನಡುವೆ ಪಂಚಾಯ್ತಿ ಆಗಿದ್ದು ಸದರಿ ಪ್ರಕಾರ ಪಿರ್ಯಾದಿ ಆರೋಪಿಗೆ 6 ಲಕ್ಷ ರುಾಗಳ ಚೆಕ್ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಸದರಿ ಚಕ್ ನ್ನು ನಗದೀಕರಣ ಮಾಡಬಾರದು ಎಂದು ಅರ್ಜಿ ಸಲ್ಲಿಸಿದ್ದಕ್ಕಾಗಿ ದಿಃ 15.04.2019 ಕ್ಕೆ ಸದರಿ ಚೆಕ್ ನಗದೀಕರಣವಾಗದೇ ಹಿಂದಿರುಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರವಾಗಿ ಪಿರ್ಯಾದಿ ಆರೋಪಿಯ ವಿರುದ್ಧ ಪ್ರಸ್ತುತ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ನಿಪಿ.1 ನ್ನು ತೋರಿಸಲಾಗಿ ಸದರಿ ನಿಪಿ.1 ಕ್ಕೆ ಮತ್ತು ನಿಡಿ.3 ಕ್ಕೆ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ.1 ಕ್ಕೆ ಮತ್ತು ನಿಡಿ.3 ಕ್ಕೆ ಸಂಬಂಧ ಇಲ್ಲ ಎಂದರೆ ಸರಿ. ನಿಪಿ.1(ಎ) ಮತ್ತು ನಿಡಿ.3 ರಲ್ಲಿರುವ ಸಹಿ ಒಂದೇ ಎಂದರೆ ಸರಿ. ನಿಡಿ.3 ರ 1 ನೇ ಪುಟದಲ್ಲಿರುವ ಸಹಿ ಒಂದೇ ಎಂದರೆ ಸರಿ. ನಿಪಿ.1 ರ ಚೆಕ್ ನಂ. 218503 ಹಾಗೂ ನಿಡಿ.3 ರ ಚೆಕ್ ನಂ. 218504 ಎಂದರೆ ಸರಿ. ಸದರಿ 2 ಚೆಕ್ ಗಳು ಬೇರೆ ಬೇರೆ ಚೆಕ್ ಗಳು ಎಂದರೆ ಸರಿ.

ತುಕಾಮಣಿ ಸಾ ಬೂತೆರವರು ನನಗೆ 20 ವರ್ಷಗಳಿಂದ ಪರಿಚಯ. ಸದರಿಯವರಿಗೆ ನಾನು ಆಗಾಗ ಈ ರೀತಿ ಚಕ್ ಗಳ ಮೂಲಕ ಹಣ ಬಿಡಿಸಿಕೊಂಡು ಬಂದಿರುತ್ತೇನೆ. ನಾನು ಸುಮಾರು 5 ಲಕ್ಷ, 6 ಲಕ್ಷ ಮತ್ತು 7 ಲಕ್ಷ ಈ ರೀತಿ ಹಣ ಬಿಡಿಸಿಕೊಂಡು ಕೊಟ್ಟಿರುತ್ತೇನೆ. ತುಕಾಮಣಿ ಸಾ ಬೂತೆರವರು ವ್ಯಾಪಾರ ಮಾಡುತ್ತಾರೆ ಅಂದರೆ ಸದರಿಯವರು ಬಾರ್, ಚೌಟ್ರಿ ಮತ್ತು ಲಾಡ್ಜ ನ್ನು ನಡೆಸುತ್ತಾರೆ. ಸದರಿಯವರು ಬೆಳಗಾಂ, ಹುಬ್ಬಳ್ಳಿ ಬೆಂಗಳೂರಿನಲ್ಲಿ ವ್ಯಾಪಾರ ಮಾಡುತ್ತಿದ್ದರು. ಸದರಿಯವರು ದೊಡ್ಡ ಉದ್ದಿಮೆದಾರರು ಎಂದರೆ ಸರಿ. ನಿಡಿ.3 ಅಲ್ಲದೇ ಈ ರೀತಿ ಸಾಕಷ್ಟು ಚೆಕಗಳನ್ನು ನನ್ನ ಮೂಲಕ ಅವರು ನಗದೀಕರಣ ಮಾಡಿಸಿಕೊಂಡಿರುತ್ತಾರೆ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಹರಿಹರ